ಬೀದರ್ ಜಿಲ್ಲೆಯಲ್ಲಿ ಬರಗಾಲ ಪರಿಹಾರ ಕಾಮಗಾರಿ

1766 (2408) ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರಗಾಲ ಕಾಮಗಾರಿಗಾಗಿ ಪ್ರಾರಂಭದಿಂದ ಇಲ್ಲಿಯವರೆಗೆ ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಒದಗಿಸಿರುವ ಹಣವೆಷ್ಟು?

ಆ) ಜಿಲ್ಲಾಧಿಕಾರಿಗಳು ಬರ ಪರಿಹಾರ ನಿಧಿಗಳ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳೇನು?

ಇ) ಸದರಿ ಕಾಮಗಾರಿಗಳಲ್ಲಿ ಪೂರ್ಣಗೊಂಡ ಹಾಗೂ ಅಪೂರ್ಣವಿರುವ ಕಾಮಗಾರಿಗಳ ವಿವರಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) 2002-03ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಬರ ಪರಿಹಾರ ಕಾಮಗಾರಿಗಳಿಗೆ ವಿವಿಧ ಮೂಲಗಳಿಂದ ಇದುವರೆಗೆ ಒಟ್ಟು ರೂ. 513.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಆ) ಒಟ್ಟು 232 ಕಾಮಗಾರಿಗಳನ್ನು ಬರ ಪರಿಹಾರ ನಿಧಿಯಡಿಯಲ್ಲಿ ತೆಗೆದುಕೊಂಡಿದೆ. ಇದರಲ್ಲಿ 118 ಕುಡಿಯುವ ನೀರಿನ ಕಾಮಗಾರಿಗಳು ಮತ್ತು 114 ರಸ್ತೆ, ಸೇತುವೆ, ಸಣ್ಣ ನೀರಾವರಿ ಕೆರೆಗಳ ಕಾಮಗಾರಿಗಳು ಇರುತ್ತದೆ.

ಇ) ಒಟ್ಟು 118 ಕುಡಿಯುವ ನೀರಿನ ಕಾಮಗಾರಿಗಳ ಪೈಕಿ 68 ಕಾಮಗಾರಿಗಳು ಪೂರ್ಣಗೊಂಡಿದ್ದು ಉಳಿದ 50 ಕಾಮಗಾರಿಗಳು ಪ್ರಗತಿಯಲ್ಲಿದೆ. ಅದೇರೀತಿ 114 ರಸ್ತೆ ಮತ್ತು ಸಣ್ಣ ನೀರಾವರಿ ಕೆರೆ ಕಾಮಗಾರಿಗಳ ಪೈಕಿ 66 ಪೂರ್ಣಗೊಂಡಿದ್ದು ಇನ್ನುಳಿದ 48 ಪ್ರಗತಿಯಲ್ಲಿದೆ.

ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ರಾಜ್ಯ ಹೆದ್ದಾರಿ ರಸ್ತೆ ದುರಸ್ಥಿ

1767 (2409) ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಬರುವ ರಾಯಚೂರು ವನಮಾರಪಲ್ಲಿ ರಸ್ತೆ ಹಾಗೂ Z-N ರಾಜ್ಯ ಹೆದ್ದಾರಿ ಮೇಲೆ ಕಮಲಾನಗರ ಹತ್ತಿರ ರಸ್ತೆಗಳು ತುಂಬಾ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ರಸ್ತೆಗಳ ದುರಸ್ತಿಗಾಗಿ ಸರ್ಕಾರ ಕೈಗೊಳ್ಳಲಿರುವ ಕ್ರಮ ಏನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಈ ಎರಡೂ ರಾಜ್ಯ ಹೆದ್ದಾರಿಗಳ ದುರಸ್ತಿ ಮಾಡುವ ಅವಶ್ಯಕತೆಯನ್ನು ಗಮನಿಸಲಾಗಿದೆ.

ಆ) ಈ ರಸ್ತೆಗಳ ವಾರ್ಷಿಕ ನಿರ್ವಹಣೆ ಅನುದಾನದಲ್ಲಿ, ಗುಂಡಿ ತುಂಬಿ ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗುವುದು.

ತಾಲ್ಲೂಕು ಕೇಂದ್ರಗಳಲ್ಲಿ ಆರ್.ಟಿ.ಸಿ. ವಿತರಣೆ

1768 (2353) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) ಮಾನ್ಯ ಕಂಬಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?